# ರಾಮಕೃಷ್ಣ ಆಶ್ರಮದ ಪ್ರಕಟಣೆಗಳಲ್ಲಿ ಮಕ್ಕಳ ಸಾಹಿತ್ಯ

ಸ್ವರ್ಣಗೌರಿ

ಬಾಲ್ಯದಿಂದಲೇ ಮಕ್ಕಳ ಮನಸ್ಸನ್ನು ನೈತಿಕ, ಮೌಲಿಕ, ಆಧ್ಯಾತ್ಮಿಕ ಆದರ್ಶಗಳತ್ತ ಆಕರ್ಷಿಸಲು ಕಥೆಪುಸ್ತಕಗಳಷ್ಟು ಪ್ರಭಾವಶಾಲಿಯಾದ ಮಾಧ್ಯಮ ಬೇರೊಂದಿಲ್ಲ. ಈ ದೃಷ್ಟಿಯಿಂದ ಆಶ್ರಮದ ಪ್ರಕಟಣೆಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಈ ವಿಷಯದ ಬಗ್ಗೆ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

ಒಂದು ರಾಷ್ಟ್ರದ ಭವಿಷ್ಯವನ್ನು ರೂಪಿಸುವವರು ಯುವ ಜನಾಂಗ. ಯುವಜನಾಂಗದ ಭವಿಷ್ಯವನ್ನು ರೂಪಿಸುವುದು ಅವರ ಬಾಲ್ಯ. ಏಕೆಂದರೆ ಬಾಲ್ಯದಲ್ಲಿ ಮಕ್ಕಳ ಮನಸ್ಸು ಅತ್ಯಂತ ಮೃದುವಾಗಿರುತ್ತದೆ. ಏನು ನೀಡಿದರೂ ಅದನ್ನು ತಕ್ಷಣವೇ ಗ್ರಹಿಸಿಬಿಡುತ್ತವೆ. ಆದ್ದರಿಂದ ಎಂತಹ ಸಂಗ, ಎಂತಹ ಪರಿಸ್ಥಿತಿ, ಎಂತಹ ವಿಚಾರಗಳು ಅವರಿಗೆ ದೊರೆಯುತ್ತದೆಯೋ, ಅದರಂತೆ ಅವರ ಶೀಲ ರೂಪುಗೊಳ್ಳುತ್ತದೆ. ಬಾಲ್ಯದಲ್ಲಿ ಹಿರಿಯರು ಸದ್ವಿಚಾರಗಳನ್ನು ಅವರಿಗೆ ತಲುಪಿಸಿದರೆ ಅವು ಅಚ್ಚೊತ್ತಿದಂತಾಗಿ ಚಿರಕಾಲ ಜ್ಞಾಪಕದಲ್ಲುಳಿದು ಮುಂದೆ ಅವರು ಬಾಳನ್ನು ನಡೆಸುವಾಗ ಫಲಕಾರಿಯಾಗಿ ನೆರವಿಗೆ ಬರುತ್ತವೆ. ರಾಷ್ಟ್ರಕ್ಕೆ ಒಂದು ನಿಧಿಯಾಗುತ್ತಾರೆ, ಇಲ್ಲದಿದ್ದರೆ ಒಂದು ಹೊರೆಯಾಗುತ್ತಾರೆ.


ಮಕ್ಕಳ ಶೀಲ ರೂಪಿಸುವಲ್ಲಿ ಸಾಹಿತ್ಯ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಏಕೆಂದರೆ ಎಲ್ಲಾ ಮಕ್ಕಳಿಗೂ ಮನೆಯಲ್ಲಿ ಒಳ್ಳೆಯ ವಾತಾವರಣ ದೊರೆಯುವುದು ಎಂದು ಹೇಳಲಾಗದು. ಹಾಗೆಯೇ ಎಲ್ಲವನ್ನೂ ಶಾಲೆಯೊಂದೇ ನೀಡಲಾಗದು. ಇಂತಹ ಸಮಯದಲ್ಲಿ ಸಾಹಿತ್ಯ ನೆರವಿಗೆ ಬರುತ್ತದೆ. ಶ್ರೇಷ್ಠ ವ್ಯಕ್ತಿಗಳೆಲ್ಲಾ ಪುಸ್ತಕ ಪ್ರೇಮಿಗಳೇ ಆಗಿದ್ದರು. ಒಂದು ಪುಸ್ತಕ ಒಂದು ಅತ್ಯುತ್ತಮ ಗೆಳೆಯನಿಗೆ ಸಮಾನ.

ಇನ್ನು ಬಾಲಕರಿಗೆ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು, ಸಂಸ್ಕಾರವನ್ನು ಕಥೆಯ ಮೂಲಕವೇ ನೀಡಬೇಕು. ಮಕ್ಕಳಿಗೆ ಕಥೆ ಎಂದರೆ ಮಿಠಾಯಿಯಂತೆ. ಕಥೆ ಹೇಳಿದರೆ ನಿದ್ರಿಸುತ್ತಿರುವ ಮಗವೂ ಎದ್ದು ಕುಳಿತುಬಿಡುತ್ತದೆ. ಎಲ್ಲಾ ಶ್ರೇಷ್ಠ ವ್ಯಕ್ತಿಗಳೂ ಬಾಲ್ಯದಲ್ಲಿ ತಾಯಿಯ ತೊಡೆಯ ಮೇಲೆ ಕುಳಿತು ಪುರಾಣ, ಭಾಗವತ ಇತ್ಯಾದಿ ಕಥೆಗಳನ್ನು ಕೇಳುತ್ತಲೇ ಬೆಳೆದರು. ಕಥೆ ಎಂದರೆ ವಯಸ್ಕರಿಗೂ, ಕಂದಮ್ಮಗಳಿಗೂ ಸಮವಾಗಿ ಪ್ರಿಯವಾದ ಮಿಠಾಯಿಯಂತೆ.

ಯಾವುದೇ ಸಂಚಿಕೆ ಪರಿಪೂರ್ಣ ಎನಿಸಿಕೊಳ್ಳುವುದು, ಅದು ಎಲ್ಲಾ ವಯಸ್ಸಿನವರನ್ನೂ ಮುಟ್ಟಿದರೆ ಮಾತ್ರ. ಈ ನಿಟ್ಟಿನಲ್ಲಿ ಶ್ರೀರಾಮಕೃಷ್ಣ ಆಶ್ರಮವು ಮಕ್ಕಳಿಗಾಗಿ ಅನೇಕ ಚಿತ್ರಕಥೆಗಳ ಪುಸ್ತಕಗಳನ್ನು ಪ್ರಕಾಶನಗೊಳಿಸುವ ಮೂಲಕ ಮಕ್ಕಳ ಸಾಹಿತ್ಯ ಜಗತ್ತನ್ನು ಶ್ರೀಮಂತಗೊಳಿಸಿದೆ. ವಿವೇಕಾನಂದರೇ ರಾಮಾಯಣ, ಮಹಾಭಾರತ, ಬಿಲ್ವಮಂಗಳ, ಪ್ರಹ್ಲಾದ, ಜಡಭರತ ಇತ್ಯಾದಿ ಕಥೆಗಳನ್ನು ಬಹಳ ಸ್ವಾರಸ್ಯಕರವಾಗಿ ಹೇಳುವ ಮೂಲಕ ಮಕ್ಕಳ ಸಾಹಿತ್ಯಕ್ಕೆ ರಾಮಕೃಷ್ಣ ಸಂಘದ ಪ್ರಥಮ ದೇಣಿಗೆ ನೀಡಿದರು.

ಯಾವುದೇ ಪತ್ರಿಕೆಯಲ್ಲೂ ಮಕ್ಕಳಿಗಾಗಿ ಒಂದೆರಡು ಪುಟಗಳು ಇಲ್ಲದಿರುವುದಿಲ್ಲ. ಮಕ್ಕಳಿಗಾಗಿ ಎಂದು ಇದು ಮೀಸಲಾಗಿದ್ದರೂ ಹಿರಿಯರೂ ಸಹ ಅದನ್ನು ಓದದೇ ಬಿಡುವವರಲ್ಲ. ಅಷ್ಟೇ ಏಕೆ? ಪ್ರಥಮವಾಗಿ ಅದನ್ನು ಓದಿಯೇ ನಂತರ ಇತರೆ ಲೇಖನಗಳನ್ನು ಓದುತ್ತಾರೆ. ಸಾಮಾನ್ಯವಾಗಿ ಮಕ್ಕಳಿಗಾಗಿ ಕಥೆಗಳ ರೂಪದಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಎತ್ತಿಹಿಡಿದರೂ ಹಿರಿಯರಿಗೂ ಅವು ಮನಮುಟ್ಟುವಂತಿವೆ. ಹಿಂದೆ ಪ್ರಕಟವಾಗುತ್ತಿದ್ದ 'ಚಂದಮಾಮ' ಎಂಬ ಮಕ್ಕಳ ಸಚಿತ್ರ ಕಥೆ ಪುಸ್ತಕವನ್ನೂ ಕಿರಿಯರಿಂದ ಹಿಡಿದು ಹಿರಿಯರವರೆಗೆ ಮನೆಯಲ್ಲಿ ಎಲ್ಲರೂ ಓದುತ್ತಿದ್ದರು. ಅದೇ ರೀತಿ ಪ್ರಸಿದ್ಧ 'ಅಮರ ಚಿತ್ರಕಥೆ' ನಮ್ಮ ಸಂಸ್ಕೃತಿಯ ಹಲವು ಕಥೆಗಳನ್ನು ಪ್ರಕಟಿಸಿದೆ.

**ಮಕ್ಕಳಿಗಾಗಿ ಸಚಿತ್ರ ಕಥೆಗಳು:** ''ಆಡು ಮುಟ್ಟದ ಸೊಪ್ಪಿಲ್ಲ, ಕವಿ ಬರೆಯದ ವಿಷಯವಿಲ್ಲ'' ಎಂಬ ನಾಣ್ಣುಡಿಯಂತೆ ಸಚಿತ್ರ ಕಥೆಗಳು ಮಕ್ಕಳಿಗೆ ತಿಳಿಸದ ವಿಷಯವೇ ಇಲ್ಲವೇನೋ ಎಂದೆನಿಸುತ್ತದೆ. ಪೌರಾಣಿಕ, ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಹೀಗೆ ಹತ್ತು ಹಲವಾರು ವಿಷಯಗಳನ್ನು ತಿಳಿಸುವ ಮೂಲಕ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ತಾಯಿಯ ಪಾತ್ರವನ್ನು ನಿರ್ವಹಿಸುತ್ತದೆ, ಈ ಸರಣಿ. ರಾಮ, ಕೃಷ್ಣ, ಕರ್ಣ, ಸ್ವಾಮಿ ವಿವೇಕಾನಂದ, ಪಿಪ್ಪಲಾದ, ಬಕಾಸುರ, ವಾಲ್ಮೀಕಿ, ಹನುಮಂತ, ಕುಬೇರ, ಭೀಮ, ಶಬರಿ, ಕನಕದಾಸ, ಪುರಂದರದಾಸ, ಚೈತನ್ಯ ಮಹಾಪ್ರಭು ಮುಂತಾದ ಪರಿಚಿತ ಶ್ರೇಷ್ಠ ವ್ಯಕ್ತಿಗಳ ಕುರಿತು ಬರೆದಂತೆ, ಅಷ್ಟಾಗಿ ಜನಮಾನಸ ತಲುಪಿರದ ಅಂಬರೀಷ, ದೇವಯಾನಿ, ಕಚ, ಅಭಿರಾಮಭಟ್ಟ, ಪರಶುರಾಮ, ಕವಿ ಕಂಬನ್, ಮಹಾಭಕ್ತ ರವಿದಾಸ, ಮುಚುಕುಂದ ಮುಂತಾದ ವ್ಯಕ್ತಿಗಳ ಕುರಿತಾಗಿಯೂ ಸ್ವಾರಸ್ಯಕರವಾದ ಕಥೆಗಳಿವೆ.




ಉದಾಹರಣೆಗೆ, 'ಕೃಷ್ಣನ ಸಮಯ ಬುದ್ಧಿ'ಯ ಕಥೆ. ಹದಿಮೂರು ಚಿತ್ರಗಳಿರುವ, ಮೂರು ಪುಟಗಳ ಈ ಕಥೆ ಇಷ್ಟು ಸೊಗಸಾಗಿ, ಎಷ್ಟೊಂದು ಮಹತ್ತರ ವಿಷಯಗಳನ್ನು ಸರಳವಾಗಿ ತಿಳಿಸಲು ಸಾಧ್ಯವೇ ಎಂದು ಸೋಜಿಗವಾಗುತ್ತದೆ. ಕಥಾವಸ್ತುವಾಗಲಿ, ಭಾಷೆಯಾಗಲಿ ಸುಮ್ಮನೆ ಓದಿಸಿಕೊಂಡು ಹೋಗುತ್ತದೆ.


ಮಕ್ಕಳ ವ್ಯಕ್ತಿತ್ವ ಮತ್ತು ಭವಿಷ್ಯವನ್ನು ರೂಪಿಸುವಂತ ತತ್ತ್ವಗಳನ್ನು ಕಥೆಗಳೆಂಬ ಗುಳಿಗೆಗಳ ರೂಪದಲ್ಲಿ ನೀಡುವುದೇ ಹೆಚ್ಚು ಸಮಂಜಸ. ಕೃತಜ್ಞತೆ ಇಲ್ಲದ ನಾಯಿ, ಬದಲಾಯಿಸಲಾಗದ ವಿಧಿ, ವಿದ್ಯೆಯಿಂದ ವಿನಯ, ಚಿನ್ನದ ಕೈ, ರಾಜ, ದುರಾಸೆಯೇ ಮನುಷ್ಯನ ಅಳಿವಿಗೆ ಕಾರಣ, ವಿಚಾರವಂತಿಕೆಯೇ ಜ್ಞಾನ, ಐರಾವತನ ಗರ್ವಭಂಗ, ಸತ್ಯದ ಹಿರಿಮೆ, ನಿಸ್ವಾರ್ಥತೆಯ ಫಲ... ಹೀಗೆ ಕುತೂಹಲ ಕೆರಳಿಸುವ ಶೀರ್ಷಿಕೆಗಳಿಂದ ಕೂಡಿದ ರೋಚಕ ಕಥೆಗಳಿವೆ.

**ವಿದ್ಯಾರ್ಥಿಗಳಿಗಾಗಿ ಕಥೆಗಳು:** ದೇಹದ ಆರೋಗ್ಯಕ್ಕೆ ಹೇಗೆ ಪೌಷ್ಟಿಕ ಆಹಾರ ಅಗತ್ಯವೋ ಹಾಗೆ ಬೆಳೆಯುವ ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ಆರೋಗ್ಯಕ್ಕಾಗಿ ಜ್ಞಾನವೂ ಅದಕ್ಕಿಂತ ಮುಖ್ಯ. ಬಾಲ್ಯದಿಂದಲೇ ನಾವು ಮಕ್ಕಳಿಗೆ ಶುಭಚಿಂತನೆಗಳನ್ನು ನೀಡದಿದ್ದರೆ, ಬೆಳೆಯುತ್ತಾ ಅವರು ಸುಲಭವಾಗಿ ದುಶ್ಚಟಗಳಿಗೆ ಬಲಿಯಾಗಿ ಬಿಡುತ್ತಾರೆ. ಈ ದಿಶೆಯಲ್ಲಿ ಶ್ರೀರಾಮಕೃಷ್ಣ ಆಶ್ರಮದ ಕಳಕಳಿಯ ಸೇವೆಯೇ ಫಲವೇ 'ವಿದ್ಯಾರ್ಥಿಗಳಿಗಾಗಿ ಕಥೆಗಳು'.

೨೦೦೭ನೇ ಇಸವಿಯಿಂದ ಇಲ್ಲಿಯವರೆಗೆ ಐದು ಭಾಗಗಳಾಗಿ ಪ್ರಕಟಗೊಂಡ ಈ ಸರಣಿಯ ಒಂದೊಂದು ಭಾಗವೂ ಆರೇಳು ಮುದ್ರಣಗಳನ್ನು ಕಂಡಿರುವುದು ವಿದ್ಯಾರ್ಥಿಗಳ ಜ್ಞಾನದಾಹಕ್ಕೆ ಸಾಕ್ಷಿಯಾಗಿದೆ. ಅಂದರೆ ಒಟ್ಟಾಗಿ ಒಂದು ಲಕ್ಷಕ್ಕೂ ಹೆಚ್ಚು ಪ್ರತಿಗಳ ಮಾರಾಟವಾಗಿದೆ ಎಂದಾಯಿತು! ಈ ಅಂಕಿಅಂಶಗಳು ಈ ಸರಣಿಯ ಯಶೋಗಾಥೆಯನ್ನು ಹಾಡುತ್ತಿದೆ ಎನ್ನೋಣವೆ?

''ಯಾವ ಕಾಲದಲ್ಲೂ ಸಂತರಿಗೆ ಬರವಿಲ್ಲ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಸಂತ ನಾಮದೇವ, ಅಪ್ಪಯ್ಯ ದೀಕ್ಷಿತರು, ದ್ವಾರಕೆಯ ರಾಮದಾಸ, ನರಸೀ ಮೆಹತಾ, ರಬಿಯ ಬಶ್ರೀ, ಸಂತ ಏಕನಾಥ ಮುಂತಾದ ಭಗವದ್‌ಭಕ್ತರ ಕಥೆಗಳು ವಿದ್ಯಾರ್ಥಿಗಳಲ್ಲಿ ಭಕ್ತಿಭಾವ ಪ್ರಚೋದಿಸಲು ಸಹಾಯಕವಾಗಿವೆ.

ಆಸೆಯನ್ನು ಗೆಲ್ಲಬೇಕು, ದೇವರೆಲ್ಲಿದ್ದಾನೆ? ಯಾರು ನಿಜವಾದ ಭಕ್ತ? ಮೂರು ಬೊಂಬೆಗಳು, ಹಣದ ಹಂಗು, ಅಚ್ಚರಿಯ ಕನ್ನಡಿ, ಅಪೂರ್ವ ದೃಷ್ಟಿಕೋನ, ಕ್ಷಮೆಗಿಂತ ಹಿರಿದಿಲ್ಲ, ದುಡುಕಬಾರದು, ನ್ಯೂಟನ್ನನ ಔದಾರ್ಯ, ಸರಳ ಭಕ್ತಿಯ ಶಕ್ತಿ, ಉಡುಗೊರೆ ಕಿರಿದಾದರೂ ಉದ್ದೇಶ ಹಿರಿದಾಗಿರಬೇಕು– ಹೀಗೆ ಕುತೂಹಲಕಾರಿ ಶೀರ್ಷಿಕೆಗಳು ಇವೆ. ಇವು ವಿದ್ಯಾರ್ಥಿಗಳಲ್ಲಿ ವಿಚಾರ ಬುದ್ಧಿಯನ್ನು ಪ್ರಚೋದಿಸುವ ಜೊತೆಗೆ ಅವರಲ್ಲಿ ಕರುಣೆ, ದಯೆ, ಪ್ರೀತಿ, ಇತ್ಯಾದಿ ಸಕಾರಾತ್ಮಕ ಭಾವಗಳನ್ನು ಕೆರಳಿಸುತ್ತದೆ.





ಇಂತಹ ಮೌಲ್ಯಾಧಾರಿತ ಕಥೆಗಳನ್ನು ನಮ್ಮ ಕನ್ನಡಿಗರಿಗೆ ನೀಡಿದ ಸ್ವಾಮಿ ರಾಘವೇಶಾನಂದರಿಗೆ ಪುನಃ ಪುನಃ ನಮನಗಳು.

**ಮಕ್ಕಳಿಗಾಗಿ ಮಹಾಭಾರತ:** 'ಭಾರತಂ ಪಂಚಮೋ ವೇದಃ। ಯತೋ ಧರ್ಮಃ ತತೋ ಜಯಃ ॥'' ಈ ವಾಕ್ಯಗಳು ಮಹಾಭಾರತವನ್ನು ವೇದಗಳಿಗೆ ಸಮಾನವೆಂದು ತಿಳಿಸುತ್ತವೆ. ಮಹಾಭಾರತವು ಪ್ರಪಂಚದಲ್ಲೇ ಒಂದು ಅತಿ ದೊಡ್ಡ ಗ್ರಂಥ. ಇತಿಹಾಸದ ಗುಂಪಿಗೆ ಸೇರಿದ 'ರಾಮಾಯಣ', 'ಮಹಾಭಾರತ' ಗಳೆರಡೂ ಹಿಂದೂ ಜನಾಂಗವನ್ನು ವ್ಯಾಪಿಸಿ, ಅವರ ನಿತ್ಯ ಜೀವನಕ್ಕೆ ಪ್ರವೇಶಿಸಿ, ಸಮಾಜದ ಪ್ರತಿಯೊಂದು ಧಮನಿಯಲ್ಲಿ ಅನುರಣಿತವಾಗುತ್ತಿದೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಮಹಾಭಾರತದಲ್ಲಿ ಮಾನವ ಜೀವನಕ್ಕೆ ಅಗತ್ಯವಾದ ಹಲವಾರು ನೈತಿಕ ಮೌಲ್ಯಗಳು, ಧಾರ್ಮಿಕ ವಿಚಾರಗಳು ತುಂಬಿವೆ. ಇದು ಎಷ್ಟು ವಿಸ್ತಾರವಾದುದೆಂದರೆ 'ಮಹಾಭಾರತದಲ್ಲಿ ಇಲ್ಲದುದು ಬೇರೆಲ್ಲೂ ದೊರೆಯುವುದಿಲ್ಲ' ಎಂಬ ನಾಣ್ಣುಡಿಯೇ ಪ್ರಚಲಿತದಲ್ಲಿದೆ. ಹಿಂದೂ ಧರ್ಮದ ಅತ್ಯಂತ ಪ್ರಸಿದ್ಧವಾದ ಗ್ರಂಥ 'ಶ್ರೀಮದ್ ಭಗವದ್ಗೀತೆ'ಯು ಮಹಾಭಾರತದ ಒಂದು ಅಂಶವಾಗಿದೆ.

ಅಣ್ಣತಮ್ಮಂದಿರ ಮಕ್ಕಳಲ್ಲಿ ರಾಜ್ಯದ ವಿಚಾರವಾಗಿ ಘೋರ ಯುದ್ಧವೇ ನಡೆಯಿತು. ಮಹಾಭಾರತದ ಮುಖ್ಯ ವಿಷಯವೇ ಈ ಯುದ್ಧವನ್ನು ಸುತ್ತುವರಿದಿರುವುದು. ಇದು ಮನೆಯ ಜಗಳವಾದರೂ ಅದರಿಂದ ದೇಶದ ಗತಿಯೇ ಬದಲಾಗುವ ಸಂಭವವಿತ್ತು. ಇಂದಿಗೂ ಕೂಡ ಘೋರ ಕಲಹಗಳನ್ನು ನಾವು ಕುರುಕ್ಷೇತ್ರವೆಂದು ಕರೆಯುತ್ತೇವೆ! ಧರ್ಮ ಮತ್ತು ಅಧರ್ಮಗಳ ನಡುವಿನ ಸಂಘರ್ಷವನ್ನು ಆರಂಭದಿಂದ ಕೊನೆಯವರೆಗಿನ

ಎಲ್ಲ ಘಟನೆಗಳೂ ತಿಳಿಸುತ್ತವೆ. ಹದಿನೆಂಟು ಪರ್ವಗಳಿಂದ ಎರಡು ಲಕ್ಷ ಶ್ಲೋಕಗಳುಳ್ಳ ಮಹಾಭಾರತವನ್ನು ಕೇವಲ ಐದು ಭಾಗಗಳಲ್ಲಿ ಮಕ್ಕಳಿಗೆ ಮನಮುಟ್ಟುವಂತೆ ಪ್ರಕಾಶನಗೊಳಿಸಿರುವುದು ಶ್ಲಾಘನೀಯ ವಾದದ್ದು.




ಮೊದಲ ಭಾಗದಲ್ಲಿ ಪಾಂಡವರು ಮತ್ತು ಕೌರವರೂ ರಕ್ತ ಸಂಬಂಧಿಗಳಾದರೂ ಹೇಗೆ ಅವರಲ್ಲಿ ವೈಮನಸ್ಯ ಬೆಳೆಯಿತು ಎಂಬುದರ ವಿವರಣೆಯಿದೆ.

ಎರಡನೆ ಭಾಗದಲ್ಲಿ ಯುದ್ಧಕ್ಕೆ ಕಾರಣವಾದ ಎಲ್ಲ ಘಟನೆಗಳ ವಿವರಗಳಿವೆ. ವಿಧಿಯ ಕಠೋರತೆಯ ಪರಿಚಯವೂ ನಮಗಾಗುತ್ತದೆ. ಒಳ್ಳೆಯವರೂ, ಧಾರ್ಮಿಕರೂ ಎಂದೆನಿಸಿಕೊಂಡವರೂ ಕೂಡ ಅನೇಕ ನಷ್ಟಗಳನ್ನು ಅನುಭವಿಸುವುದನ್ನು ನೋಡಿ ಪ್ರಪಂಚದಲ್ಲಿ ನ್ಯಾಯಕ್ಕೆ ಸ್ಥಾನವಿಲ್ಲವೇ ಎಂದು ಸಂದೇಹ ಬರುತ್ತದೆ. ವ್ಯಕ್ತಿಗಳನ್ನು ಚಿತ್ರಿಸುವಲ್ಲಿ ಅತ್ಯಂತ ಯಶಸ್ವಿಗಳಾದ ವ್ಯಾಸರು ವಿಭಿನ್ನ ಪರಿಸ್ಥಿತಿಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ತೋರುವ ವಿಭಿನ್ನ ವ್ಯಕ್ತಿಗಳನ್ನು ನಮ್ಮ ಮುಂದೆ ನಿಲ್ಲಿಸಿದ್ದಾರೆ. ಮಹಾಭಾರತವು ಕೇವಲ ನೈತಿಕ ಮೌಲ್ಯಗಳ ಶಾಸ್ತ್ರವಲ್ಲ, ಮನುಷ್ಯನ ಸ್ವಭಾವದ ರಹಸ್ಯವನ್ನು ಹೊರಗೆಡಹುವ ಮನೋಜ್ಞವಾದ ಕಥಾಸಂಗ್ರಹ ಕೂಡ.

ಪಾಂಡವರು ಹನ್ನೆರಡು ವರ್ಷಗಳ ಕಾಲ ವನವಾಸ ಹಾಗೂ ಒಂದು ವರ್ಷ ಅಜ್ಞಾತವಾಸದ ವಿವರಣೆ ಮತ್ತು ಅದನ್ನು ಸುತ್ತುವರಿದಂತೆ ಅನೇಕಾನೇಕ ಕುತೂಹಲಕಾರಿ ಘಟನೆಗಳಿವೆ. ಉದಾಹರಣೆಗೆ, ತಮ್ಮನ್ನು ಕಾಡಿಗೆ ಹಿಂಬಾಲಿಸಿ ಬರುತ್ತಿದ್ದ ಪ್ರಜೆಗಳಿಗೆ ಊಟವಿಕ್ಕಲಾರದ ಅಸಹಾಯಕ ಪರಿಸ್ಥಿತಿಯಲ್ಲಿ ಸೂರ್ಯದೇವನು ಯುಧಿಷ್ಟರನಿಗೆ ಅಕ್ಷಯಪಾತ್ರೆ, ಸದಾ ಪೂರ್ಣವಾಗಿರುವ ಪಾತ್ರೆ ನೀಡುತ್ತಾನೆ. ಈ ಪಾತ್ರೆಗೆ ಸಂಬಂಧಪಟ್ಟಂತೆ ಅನೇಕ ಸ್ವಾರಸ್ಯಕರ ವಿಷಯಗಳು, ಘಟನೆಗಳು ಮನಸ್ಸನ್ನು ಹಿಡಿದು ನಿಲ್ಲಿಸಿಬಿಡುತ್ತದೆ.


ಮೂರನೆಯ ಭಾಗದಲ್ಲಿ ಕೌರವರು ಒಂದು ಅಂಗುಲ ನೆಲವನ್ನು ಕೊಡುವುದಿಲ್ಲವೆಂದು ಯುದ್ಧಕ್ಕೆ ಆಹ್ವಾನವಿತ್ತ ಸ್ವಾರಸ್ಯಕರ ಸಂಭಾಷಣೆಗಳು ಶ್ರೀಕೃಷ್ಣನ ಶಾಂತಿ ಸಂಧಾನ ವಿಫಲವಾದದ್ದು, ಅನಿವಾರ್ಯವಾದ ಘೋರ ಯುದ್ಧದ ವಿವರಣೆಗಳಿವೆ. ಈ ಭಾಗ ನಮ್ಮನ್ನು ಆ ದುರ್ಘಟನೆಯತ್ತ ಕರೆದೊಯ್ಯುತ್ತದೆ.

ನಾಲ್ಕನೆಯ ಭಾಗದಲ್ಲಿ ಭೀಷ್ಮಪರ್ವ, ದ್ರೋಣಪರ್ವ ಎಂದು ಎರಡು ಭಾಗಗಳಿವೆ. ಪೂರ್ವಕಾಲದ ಅತ್ಯಂತ ಘೋರ ಯುದ್ಧದ ಒಂದು ರೋಮಾಂಚಕ ಚಿತ್ರಣವಿದೆ. ಪುರಾಣಯುದ್ಧಗಳಲ್ಲಿ ಧರ್ಮಕ್ಕೆ ಹೆಚ್ಚು ಪ್ರಾಶ್ಯಸ್ತವಿತ್ತು. ಮಹಾಭಾರತದ ರತ್ನದಂತಿರುವ, ಏಳುನೂರು ಶ್ಲೋಕಗಳಿಂದ ಕೂಡಿದ ಭಗವದ್ಗೀತೆಯ ಸಾರಾಂಶವನ್ನು ಮಕ್ಕಳಿಗಾಗಿ ಆರು ಪುಟಗಳಲ್ಲಿ ಅದೆಷ್ಟು ಅದ್ಭುತವಾಗಿ ಸೆರೆಹಿಡಿದಿದ್ದಾರೆ!

ಐದನೆಯ ಭಾಗವು ಕಥೆಯ ಅದ್ಭುತ ಅಂತ್ಯದೆಡೆಗೆ ನಮ್ಮನ್ನು ಕರೆದೊಯ್ಯುವುದು. ಇಲ್ಲಿ ನಾವು ರೋಚಕ ಘಟನೆಗಳಿಂದ ಕೂಡಿದ ಹನ್ನೊಂದು ಅಧ್ಯಾಯಗಳನ್ನು ವೇಗವಾಗಿ ಹಾದು ಹೋಗುತ್ತೇವೆ. ಹಲವು ತಿರುವು ಮುರುವುಗಳಂತಹ ಘಟನೆಗಳಿಂದ ಕೂಡಿದ ಈ ಮಹಾಕಾವ್ಯ ಕೊನೆಗೂ ಧರ್ಮವೊಂದೇ ಉಳಿಯುವುದು ಎಂಬುದನ್ನು ತೋರಿಸಿಕೊಡುತ್ತದೆ.

ಕನ್ನಡದಲ್ಲಿ ಇಷ್ಟು ಅಚ್ಚುಕಟ್ಟಾಗಿ, ಸುಲಲಿತ ಶೈಲಿಯಲ್ಲಿ ಬರೆದು ಎಲ್ಲರ ಆದರಕ್ಕೆ ಪಾತ್ರರಾದವರು ಸ್ವಾಮಿ ರಾಘವೇಶಾನಂದರು. ೨೦೦೧ನೆ ಇಸವಿಯಲ್ಲಿ ಪ್ರಥಮ ಪ್ರಕಟಣೆ, ಇಲ್ಲಿಯವರೆಗೆ ಐದುಭಾಗಗಳ ಸರಣಿಯಾಗಿದೆ. ಇದು ಪ್ರತಿಯೊಂದು ಭಾಗವೂ ಕನಿಷ್ಠ ಮೂರು ನಾಲ್ಕು ಮುದ್ರಣಗಳನ್ನು ಕಂಡಿವೆ. ಅಂದರೆ ಸರಿಸುಮಾರು ಒಂದು ಲಕ್ಷ ಪ್ರತಿಗಳು ಮಾರಾಟವಾಗಿದೆ.

## ಮಕ್ಕಳ ರಾಮಾಯಣ





ಭಾರತೀಯ ಸಂಸ್ಕೃತಿಯ ಮೂಲ ಗ್ರಂಥಗಳೆನಿಸಿದ ರಾಮಾಯಣ, ಮಹಾಭಾರತಗಳು ಅನೇಕ ಸಾವಿರ ವರ್ಷಗಳಿಂದ ಜನರ ಮೇಲೆ ಪ್ರಭಾವ ಬೀರುತ್ತಿದೆ. ಸ್ವಾಮಿ ವಿವೇಕಾನಂದರು ೧೯೦೦ ಇಸವಿಯಲ್ಲಿ ಕ್ಯಾಲಿಫೋರ್ನಿಯಾದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಕುರಿತು ಸುದೀರ್ಘ ಭಾಷಣಗಳನ್ನು ನೀಡಿದ್ದಾರೆ.

''ರಾಮಾಯಣ, ಮಹಾಭಾರತಗಳೆರಡೂ ಪುರಾತನ ಆರ್ಯರ ಜೀವನ ಮತ್ತು ಧರ್ಮವನ್ನು ವಿವರಿಸುವ ವಿಶ್ವಕೋಶಗಳಾಗಿವೆ. ಇವುಗಳಲ್ಲಿ ಬರುವ ನೂರಾರು ಪಾತ್ರಗಳು ಸಾವಿರಾರು ವರ್ಷಗಳಿಂದ ಹಿಂದೂಗಳಿಗೆ ಮೂಲವಾಗಿವೆ. ಮಾನವಕೋಟಿ ಇನ್ನೂ ಸಾಧಿಸಬೇಕಾಗಿರುವ ಆದರ್ಶವನ್ನು ಇವು ಚಿತ್ರಿಸುತ್ತವೆ'' *('ಕೃತಿಶ್ರೇಣಿ', ಸಂ. ೭,ಪು. ೧೭೮)*

ಶ್ರೀರಾಮಚಂದ್ರನ ಜನನ, ಬಾಲ್ಯ, ವಿವಾಹ, ಸೀತಾಪಹರಣ, ರಾವಣನ ವಧೆ, ಶ್ರೀರಾಮ ಪಟ್ಟಾಭಿಷೇಕದ ವರೆಗಿನ ಕಥಾಭಾಗವನ್ನು ನಲ್ವತ್ತನಾಲ್ಕು ಪುಟಗಳಲ್ಲಿ, ವರ್ಣರಂಜಿತ ಚಿತ್ರಗಳಿಂದ ಕೂಡಿದ ರಾಮಾಯಣವನ್ನು ನಮ್ಮ ಕನ್ನಡದ ಕಂದಮ್ಮಗಳಿಗೆ, ಪುಟಾಣಿಗಳ ಸಾಹಿತ್ಯ ಜಗತ್ತಿಗೆ ರಸದೌತಣ ನೀಡಿದವರು ಸ್ವಾಮಿ ರಾಘವೇಶಾನಂದರು.

೧೯೮೮ನೇ ಇಸವಿಯಲ್ಲಿ ಪ್ರಥಮವಾಗಿ ಪ್ರಕಾಶನಗೊಂಡ ಇದು ಹನ್ನೊಂದು ಬಾರಿ ಮುದ್ರಣಗೊಂಡಿದೆ ಹಾಗೂ ೪೦,೦೦೦ಕ್ಕೂ ಹೆಚ್ಚು ಮಾರಾಟವಾಗಿದೆ ಎನ್ನುವುದು ಮಕ್ಕಳ ಸಾಹಿತ್ಯ ಜಗತ್ತಿಗೆ ಕೀರೀಟಪ್ರಾಯದಂತೆ.

**ಮಕ್ಕಳಿಗಾಗಿ ಪೌರಾಣಿಕ ಕಥೆಗಳು:** ಪುರಾಣಗಳು ಹಿಂದೂ ಶಾಸ್ತ್ರಗಳ ಅತಿಮುಖ್ಯ ಭಾಗವಾಗಿವೆ. ಇವನ್ನು ಸನಾತನ ಸಂಸ್ಕೃತಿಯ ಆಧಾರ ಸ್ತಂಭಗಳು ಎಂದರೆ ತಪ್ಪಾಗದು. ನಮ್ಮ ಧರ್ಮ ಮತ್ತು ಸಂಸ್ಕೃತಿಯ ಪ್ರಸಾರಕ್ಕೆ ಬೇಕಾದ ಭವ್ಯ ಆದರ್ಶಗಳನ್ನು ಬಿತ್ತುವ ಕಥೆಗಳನ್ನು ಒಳಗೊಂಡಿರುವ ಸ್ಫೂರ್ತಿದಾಯಕ ಶೈಕ್ಷಣಿಕ ಉಪಕರಣ, ಅವುಗಳು. ಮಹಾವ್ಯಕ್ತಿಗಳ ಜೀವನಾದರ್ಶಗಳನ್ನು ಎಳೆಯ ಮನಸ್ಸುಗಳಲ್ಲಿ ಪರಿಣಾಮಕಾರಿಯಾಗಿ ಬಿತ್ತಬೇಕಾದ ಅಗತ್ಯವಿದೆ. ಶ್ರೇಷ್ಠ ಮೌಲ್ಯಗಳ ಬಹು ದೊಡ್ಡ ಭಂಡಾರವಾಗಿರುವ ಇವುಗಳಿಂದ ನಮ್ಮ ಸಮಾಜವು ಅಳವಡಿಸಿಕೊಳ್ಳಲೇಬೇಕಾಗಿರುವ ಹಲವು ಅಂಶಗಳಿದ್ದರೂ, ನಮ್ಮ ಮಕ್ಕಳನ್ನು ಅದರಿಂದ ಬಹಳ ದೂರ ಕೊಂಡೊಯ್ಯುತ್ತಿದ್ದೇವೆ. ವೇದ ಮತ್ತು ಉಪನಿಷತ್ತುಗಳ ಸೂಕ್ಷ್ಮ ಸತ್ಯವನ್ನು ಅವತಾರಗಳು, ಋಷಿಮುನಿಗಳು, ಅರಸರು ಹಾಗೂ ಭಕ್ತರುಗಳ ಜೀವನದ ಸ್ಥೂಲ ದೃಷ್ಟಾಂತಗಳ ಮೂಲಕ ಜನಸಾಮಾನ್ಯರ ಮನಸ್ಸಿಗೂ ತಲುಪು ವಂತೆ ಮಾಡುವಲ್ಲಿ ಪುರಾಣಗಳು ಅತ್ಯಂತ ಪ್ರಮುಖ ಪಾತ್ರ ವನ್ನು ವಹಿಸುತ್ತವೆ. ಸಾವಿರಾರು ವರ್ಷಗಳಿಂದಲೂ ಅವುಗಳು ನಮ್ಮ ಜನಾಂಗದ ಮೇಲೆ ಪ್ರಭಾವ ಬೀರುತ್ತಿವೆ.




'Mythological Stories' ಎಂಬ ಆಂಗ್ಲಭಾಷೆಯ ಪುಸ್ತಕವನ್ನು ಸರಳ ಭಾಷೆಯಲ್ಲಿ ಕನ್ನಡಕ್ಕೆ ಅನುವಾದಿಸಿದರವರು ದಾವಣಗೆರೆಯ ಶ್ರೀ ಡಿ. ಪಾಂಡುರಂಗ ಭಟ್. ೨೦೨೩ರ ಗುರುಪೂರ್ಣಿಮೆಯಂದು ಇದನ್ನು ಲೋಕಾರ್ಪಣೆ ಮಾಡಲಾಯಿತು.


''ಚುಕ್ಕಾಣಿಯಿಲ್ಲದ ನಾವೆಯಲ್ಲಿನ ಪ್ರಯಾಣದಂತಾಗಿದೆ ನಮ್ಮ ಬದುಕು. ಹಿರಿಯರು ಮಕ್ಕಳನ್ನು ಕೂಡಿಸಿಕೊಂಡು ಕಥೆಗಳನ್ನು ಹೇಳಿ ರಂಜಿಸುವುದು ಮಾಯವಾಗಿದೆ. ಹಿರಿಯರಾದಿಯಾಗಿ ಎಲ್ಲರೂ ಟೆಲಿವಿಷನ್ ವ್ಯಸನಿಗಳಾಗಿದ್ದೇವೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ನಮ್ಮ ಮುಂದಿನ ಪೀಳಿಗೆಗೆ ನೆನಪಿಸುವ ಕೆಲಸವಾಗುತ್ತಿಲ್ಲ. ಕೌಟುಂಬಿಕ ಬಂಧನಗಳನ್ನು ಗಟ್ಟಿಗೊಳಿಸುವಲ್ಲಿ ಈ ಕಥೆಗಳು ಸ್ವಲ್ಪಮಟ್ಟಿಗಾದರೂ ಸಹಕಾರಿಯಾದಲ್ಲಿ ನನ್ನ ಪ್ರಯತ್ನ ಸಾರ್ಥಕವಾಯಿತು ಎಂದುಕೊಳ್ಳುತ್ತೇನೆ'' ಎಂದು ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಖೇದ ವ್ಯಕ್ತಗೊಳಿಸಿದ್ದಾರೆ ಲೇಖಕರು.

ಯಮನನ್ನು ಗೆದ್ದ ರಾಜಕುಮಾರಿ, ಸಾಗರವನ್ನೇ ಬತ್ತಿಸಿದ ಋಷಿರಾಣಿಯಾದ ಕಪ್ಪೆ, ಮೂಷಿಕದ ಮದುವೆ, ಅನುಸೂಯಳ ಪವಿತ್ರತೆ, ಸಹೋದರಿಯ ಅಸೂಯೆ, ಗೃಹವಿಲ್ಲದ ಗೃಹಿಣಿ- ಹೀಗೆ ಎಂಬತ್ತೈದು ರೋಚಕ ಕಥೆಗಳ ಸಂಕಲನ ಈ ಪುಸ್ತಿಕೆ. ಈ ಪುಸ್ತಕದ ವೈಶಿಷ್ಟ್ಯವೇನೆಂದರೆ ಪ್ರತಿಯೊಂದು ಕಥೆಯ ಅಂತ್ಯದಲ್ಲಿ ಮುಖ್ಯಪಾತ್ರದ ಕುರಿತು ಒಂದು ಪ್ರಶ್ನೋತ್ತರವಿದೆ. ಇದರಿಂದ ಪೌರಾಣಿಕ ಕಥೆಯಲ್ಲಿನ ಕೆಲವು ಶ್ರೇಷ್ಠ ವ್ಯಕ್ತಿಗಳ ಹೆಸರುಗಳು ಮಕ್ಕಳ ಸ್ಮೃತಿಪಟಲದಲ್ಲಿ ಉಳಿಯಲು ಸಹಾಯವಾಗುತ್ತದೆ. ಮತೆ ಮತ್ತೆ ಓದಬೇಕೆನಿಸುವ ಈ ಕಥೆಗಳು ಶ್ರೇಷ್ಠ ಮೌಲ್ಯಗಳ ಬಗ್ಗೆ ತಿಳಿಸಿಕೊಡುತ್ತವೆ.

**ದಿವ್ಯತ್ರಯರ ಜೀವನ:** (a) **ಮಕ್ಕಳ ರಾಮಕೃಷ್ಣ:** ನಮ್ಮ ಚಿರಂತನ ಧರ್ಮದ ಸಂಸ್ಕೃತಿ ಈ ಯುಗದಲ್ಲಿ ಶ್ರೀರಾಮಕೃಷ್ಣ ರೂಪದಲ್ಲಿ ಅವತರಿಸಿದೆ. ಅವರ ಜೀವನ ಮತ್ತು ಸಂದೇಶ ಕೇವಲ ಭಾರತವಾಸಿಗಳಿಗೆ ಮಾತ್ರವಲ್ಲ-ಇಡೀ ಮಾನವ ವರ್ಗದ ಆಧುನಿಕ ಸಮಸ್ಯೆಗಳಿಗೆ ಬೆಳಕನ್ನು ಚೆಲ್ಲಿ ಶ್ರಾಂತರಾದವರಿಗೆ ವಿಶ್ರಾಂತಿಯನ್ನು ನೀಡುವಂತಹದಾಗಿದೆ. ಸ್ವಾಮಿ ವಿಶ್ವಾಶ್ರಯಾನಂದರು 'ಶಿಶುದೇರ್ ರಾಮಕೃಷ್ಣ' ಎಂದು ವಂಗಭಾಷೆಯಲ್ಲಿ ಮಕ್ಕಳಿಗಾಗಿಯೇ ಬರೆದ ಹೊತ್ತಿಗೆಯನ್ನು ನೋಡಿ, 'ಅಯ್ಯೋ! ನಮ್ಮ ಕನ್ನಡನಾಡಿನ ಮಕ್ಕಳಿಗೆ ಇಂಥ ಸೌಲಭ್ಯವಿಲ್ಲವಲ್ಲ' ಎಂದು ದುಃಖಪಟ್ಟ ಫಲವೇ 'ಮಕ್ಕಳ ರಾಮಕೃಷ್ಣ' ಪ್ರಕಟವಾಯಿತು. ಸ್ವಾಮಿ ಆದಿದೇವಾನಂದರ ಈ ಪ್ರಯತ್ನವು ೧೯೭೫ನೇ ಇಸವಿಯಲ್ಲಿ ಈ ಕಿರುಹೊತ್ತಿಗೆಯ ರೂಪವನ್ನು ಪಡೆಯಿತು. ಇಲ್ಲಿಯವರೆಗೆ ಆರು ಮುದ್ರಣಗಳು, ೩೫,೦೦೦ ಪ್ರತಿಗಳು ಮಾರಾಟವಾಗಿವೆ. 'ಶ್ರೀರಾಮಕೃಷ್ಣರ ಅನುಕಂಪೆ ಮತ್ತು ಅನುಗ್ರಹ ಮಕ್ಕಳ ಮನಸ್ಸಿನಲ್ಲಿ ಉದಯಿಸಲಿ' ಎಂಬ ಪ್ರಾರ್ಥನಾಭಾವದಿಂದ ಇದನ್ನು ಕನ್ನಡನಾಡಿನ ಮಕ್ಕಳಿಗೆ ಅರ್ಪಿಸಿದ್ದಾರೆ ಲೇಖಕರು.


ಸ್ವಾಮಿ ವಿವೇಕಾನಂದರ ಸೊಗಸಾದ 'ಆಹ್ವಾನ'ದೊಂದಿಗೆ ಪುಸ್ತಕ ಪ್ರಾರಂಭವಾಗುತ್ತದೆ:

**'ಸಕಲವೇದಗಳ ಜ್ಞಾನ ಒಂದಾಗಿ ಬಂದು ಸೇರಿಹುದು ಇಲ್ಲಿ**
**ಶ್ರೀರಾಮಕೃಷ್ಣ ಗುರುದೇವ ಹೃದಯದಲ್ಲಿ**










**ಬ್ರಹ್ಮವಿಷ್ಣು ರುದ್ರಾದಿದೇವತೆಗಳೆಲ್ಲ ಶಕ್ತಿ ಬಂದು**
**ಮಿಲನಗೊಂಡಿಹುದೋ ಇವರ ಶಕ್ತಿಯಲಿ ಸಂದು!**
**ಅವತಾರವೆಲ್ಲ ಒಂದಾಗಿ ಸೇರಿ ಒಂದೆ ದೇಹ ಧರಿಸಿ**
**ಇಳೆಗಿಳಿದು ಬಂದಿಹರೋ ರಾಮಕೃಷ್ಣರೂಪ ಧರಿಸಿ**
**ಗುರುಚರಣ ಸ್ಮರಿಸಿ, ಸಾಷ್ಟಾಂಗ ನಮಿಸಿ ಕರೆವೆ ನಿಮ್ಮನ್ನೆಲ್ಲ,**
**ಸುಧಾಪಾನಕ್ಕೆ ಇದುವೆ ಆಹ್ವಾನ ಬನ್ನಿ ಬನ್ನಿ ಎಲ್ಲ!**

ಪ್ರತಿಯೊಂದು ಪುಟದಲ್ಲೂ ಮನೋಹರ ಚಿತ್ರದ ಕೆಳಗೆ ಕನ್ನಡದ ಪದ್ಯವನ್ನು ಮಕ್ಕಳು ಸವಿಯಲೆಂದು ಡಾ. ಪ್ರಭುಶಂಕರ ಅವರು ಸುಂದರವಾಗಿ ಅನುವಾದಿಸಿದ್ದಾರೆ.

**ಶ್ರೀರಾಮಕೃಷ್ಣರ ನೀತಿಕಥೆಗಳು:** ಶ್ರೀರಾಮಕೃಷ್ಣರು ಭಕ್ತರಿಗೆ ಉಪದೇಶಗಳನ್ನು ಸರಿಯಾಗಿ ಮನದಟ್ಟು ಮಾಡಲು ಹಲವಾರು ಕಥೆಗಳನ್ನು ನಿರೂಪಣೆಗಾಗಿ ಹೇಳುತ್ತಿದ್ದರು. ಇಂತಹ ಕಥೆಗಳನ್ನು ಆಯ್ದ ಗುಚ್ಛವೇ 'ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಗಳು'.

**ಹರಿಸುತಿರಲಮೃತ ವರ್ಷ**
**ಬಂದರೆನಿತೋ ಮಂದಿ ದೇವವಾಣಿಯ ಕೇಳಿ**
**ತುಂಬಿ ತುಳುಕಲು ತಮ್ಮ ಎದೆಯ ಹರ್ಷ**

ವಯಸ್ಕರಿಗೂ, ಕಂದಮ್ಮಗಳಿಗೂ ಸಮನಾಗಿ ಪ್ರಿಯವಾದ ಮಿಠಾಯಿಯಂತೆ ಇವು ರಸಭರಿತ. ವಯಸ್ಕರಿಗೆ ಕಥಾಭಾಗ ಹಾಗೂ ಅವುಗಳಲ್ಲಿ ಅಡಕವಾಗಿರುವ ಗೂಢಾರ್ಥ ಪ್ರಿಯವಾದರೆ, ಕಿರಿಯರಿಗೆ ಕಥೆಯ ಸನ್ನಿವೇಶಗಳು ಪ್ರಿಯವಾಗುವುದು. ಅವುಗಳಲ್ಲಿರುವ ನೀತಿಗಳು ಮಕ್ಕಳಿಗೆ ಈಗ ಅರ್ಥವಾಗದಿರಬಹುದು. ಆದರೆ ಅದು ಬೆಳೆದಂತೆ ಈ ಕಥೆಗಳು ಅವರೊಡನೆ ಬೆಳೆದು, ಒಂದು ದಿನ ಹಠಾತ್ತಾಗಿ ಅದರಲ್ಲಿರುವ ಒಳಾರ್ಥ ಗೋಚರವಾಗುವುದು. ಎಂತಹ ಅಚ್ಚರಿ! ಈ ಕಥೆಗಳು ಎಂದಿಗೂ ಸ್ವಾರಸ್ಯಮಯ, ನೂತನ!

ಸರ್ವಮಂಗಳ, ಏಳು ಗಡಿಗೆಗಳು, ಜಟಿಲ, ನಾಗರಹಾವು, ಹಸುವನ್ನು ಕೊಂದವರ್‍ಯಾರು, ಪಂಡಿತ ಮತ್ತು ಹಾಲು ಮಾರುವ ಹುಡುಗಿ–ಹೀಗೆ ಒಟ್ಟು ಏಳು ಕಥೆಗಳಿವೆ.

ಮೂಲ ಗ್ರಂಥಕ್ಕೆ ಕುಂದುಬಾರದಂತೆ ಸರಳ, ಸುಂದರ ಶೈಲಿಯಲ್ಲಿ ಅನುವಾದಿಸಿದ ಸ್ವಾಮಿ ವೀರೇಶಾನಂದರಿಗೆ ಮಕ್ಕಳೆಲ್ಲಾ ಆಭಾರಿಯಾಗಿರುವರು ಎಂಬುದರಲ್ಲಿ ಸಂದೇಹವಿಲ್ಲ. ಸುಂದರವಾದ ಅಂಚುಗಳು ಹಾಗೂ ಚಿತ್ರಗಳು ಪ್ರತಿಯೊಂದು ಪುಟವನ್ನೂ ಜೀವಂತವಾಗಿಸಿವೆ. ಈ ಕಥೆಗಳನ್ನು ನಿರೂಪಿಸುವಾಗ ಐರಿನ್ ರೇ ಹಾಗೂ ಮಲ್ಲಿಕಾ ಗುಪ್ತ ಹಿರಿಯರನ್ನು ಮರೆತು, ನಲಿದಾಡುವ ಕಿರಿಯರಿಗಾಗಿ ಈ ಕಥೆಗಳನ್ನು ಸರಳವಾಗಿ ನಿರೂಪಿಸಿದ್ದಾರೆ. ಜಟಿಲನ ಅಣ್ಣ ಮಧುಸೂದನ ಪುಟದಿಂದ ಹೊರಬಂದು ನಿಮ್ಮನ್ನು ಸಂಧಿಸಿ, ಮರೆಯಲಾಗದ ಪ್ರಭಾವ ಬೀರಿ ಹೃನ್ಮನಗಳನ್ನು ಸೆಳೆದಿದ್ದಾನೆ.

೨೦೦೨ನೇ ಇಸವಿಯಲ್ಲಿ ಪ್ರಥಮವಾಗಿ ಪ್ರಕಟವಾದ ಈ ಹೊತ್ತಿಗೆ ಈಗಾಗಲೇ ನಾಲ್ಕು ಮುದ್ರಣಗಳನ್ನು ಕಂಡಿವೆ, ೨೫,೦೦೦ ಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ.

ಇದಲ್ಲದೆ ಸ್ವಾಮಿ ಸ್ಮರಣಾನಂದರು ಬರೆದ ಇಂಗ್ಲಿಷ್ ಪುಸ್ತಕವನ್ನು ಹೆಚ್.ಎನ್.ಮುರಳೀಧರ ಅವರು 'ರಾಮಕೃಷ್ಣ ಜೀವನ ಕಥೆ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಈಗಾಗಲೇ ಏಳು ಮುದ್ರಣಗಳನ್ನು ಕಂಡ ಈ ಹೊತ್ತಿಗೆಯ ೩೫,೦೦೦ ಪ್ರತಿಗಳು ಮಾರಾಟವಾಗಿವೆ. ಶ್ರೀರಾಮಕೃಷ್ಣರ ಜನನದಿಂದ ಮಹಾಸಮಾಧಿಯವರೆಗಿನ ಎಲ್ಲ ಘಟನೆಗಳೂ ಮಕ್ಕಳಿಗೆ ಅರ್ಥವಾಗುವ ಹಾಗೆ ಬಹಳ ಸೊಗಸಾಗಿ ಮೂಡಿ ಬಂದಿದೆ.

**'ಶ್ರೀರಾಮಕೃಷ್ಣ ದೃಷ್ಟಾಂತ ಕಥೆಗಳು'** ಎಂಬ ೩೨ ಕಿರುಕಥೆಗಳ ಸಂಗ್ರಹವನ್ನು ಮಕ್ಕಳಿಗೆ ನೀಡಿದವರು ಸ್ವಾಮಿ ಪುರುಷೋತ್ತಮಾನಂದರು. ಐದು ಮುದ್ರಣಗಳಾಗಿ, ೨೫,೦೦೦ ಪ್ರತಿಗಳು ಮಾರಾಟವಾಗಿವೆ.


**ಮಕ್ಕಳ ಶಾರದಾದೇವಿ:** ಮಾಧುರ್ಯವೇ ಮೂರ್ತೀಭವಿಸಿದಂತಹ ವ್ಯಕ್ತಿ ಶ್ರೀಶಾರದಾದೇವಿಯವರು. ಅವರ ಸರ್ವವ್ಯಾಪಿಯಾದ ಪ್ರೀತಿಗೆ, ಯಾವುದೇ ದೇಶ ಅಥವಾ ಭಾಷೆಯ ಎಲ್ಲೆಕಟ್ಟುಗಳಿರಲಿಲ್ಲ. ಅವರನ್ನು ಕಂಡ ಎಲ್ಲ ಪಾಶ್ಚಾತ್ಯ ಭಕ್ತರೂ, ಅವರನ್ನು ತಮ್ಮವರೆಂದೇ ತಾವೆಲ್ಲ ಅವರ ಸಾನ್ನಿಧ್ಯದಲ್ಲಿ ಕೇವಲ ಮಕ್ಕಳೆಂದೇ ಭಾವಿಸಿದ್ದರು.

ಶ್ರೀಶಾರದಾದೇವಿಯವರ ಜೀವನ ಹಾಗೂ ಅವರ ಸಂದೇಶ ಸ್ವಾಮಿ ಸ್ಮರಣಾನಂದರ ಇಂಗ್ಲೀಷ್ ಮೂಲದಿಂದ ಕನ್ನಡಕ್ಕೆ ಅನುವಾದಿಸಿದವರು ಪ್ರಸಿದ್ಧ ಕನ್ನಡ ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು. ಜನನದಿಂದ ಮಹಾಸಮಾಧಿಯವರೆಗೆ ಬರುವ ಎಲ್ಲಾ ಮುಖ್ಯ ಘಟನೆಗಳನ್ನು ವರ್ಣರಂಜಿತ ಚಿತ್ರಗಳಿಂದ ಕೂಡಿದ ಈ ಹೊತ್ತಿಗೆಯು ಇಲ್ಲಿಯವರೆಗೆ ಆರು ಬಾರಿ ಮುದ್ರಿಸಲಾಗಿದೆ ಮತ್ತು ಸರಾಸರಿ ೨೫,೦೦೦ಕ್ಕೂ ಹೆಚ್ಚು ಪ್ರತಿಗಳು ಮಕ್ಕಳ ಕೈಸೇರಿವೆ.

**ಸ್ವಾಮಿ ವಿವೇಕಾನಂದ:** ವಿಶ್ವವನ್ನೇ ಬೆರಗುಗೊಳಿಸಿದ ಮತ್ತು ಸನಾತನ ಧರ್ಮದ ಹಿರಿಮೆಯನ್ನು ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಯಶಸ್ವಿಯಾಗಿ ಪ್ರತಿಪಾದಿಸಿದ ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರ ಕುರಿತು ಇಲ್ಲಿಯವರೆಗೆ ಐದು ಪುಸ್ತಕಗಳು ಪ್ರಕಟವಾಗಿವೆ-'ಮಕ್ಕಳ ವಿವೇಕಾನಂದ', 'ವಿವೇಕಾನಂದ ನೀತಿ ಕಥೆಗಳು', 'ಸ್ವಾಮಿ ವಿವೇಕಾನಂದರ ಜೀವನ ಕಥೆ', 'ವಿವೇಕಾನಂದರ ನೀತಿ ಕಥಾ ಮಂಜರಿ' ಹಾಗೂ 'ಸ್ವಾಮಿ ವಿವೇಕಾನಂದ(ಸಚಿತ್ರ)'. ಸ್ವಾಮಿ ಪುರುಷೋತ್ತಮಾನಂದರು, ಸ್ವಾಮಿ ಕರುಣಾಕರನಂದ, ಶ್ರೀ ಮುರಳೀಧರ ಹಾಗೂ ಡಾ. ಕೆ.ಎಲ್.ಪ್ರಸನ್ನಾಕ್ಷಿಯವರು ಈ ಪುಟ್ಟ ಪುಸ್ತಕಗಳನ್ನು ಕನ್ನಡಕ್ಕೆ ಸುಂದರ ಶೈಲಿಯಲ್ಲಿ ಸುಲಲಿತ ಭಾಷೆಯಲ್ಲಿ ಅನುವಾದಿಸಿದ್ದಾರೆ.




ಸ್ವಾಮಿ ವಿವೇಕಾನಂದರು ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಗ್ರಂಥಗಳಿಂದ ಆಯ್ದ ಕಥೆಗಳನ್ನು ಬಹು ಸ್ವಾರಸ್ಯಕರವಾಗಿ ಮಕ್ಕಳಿಗೂ ಮನಮುಟ್ಟುವಂತೆ ತಮ್ಮ ಉಪನ್ಯಾಸಗಳಲ್ಲಿ ವಿವರಿಸಿದ್ದಾರೆ. ಅವುಗಳಿಂದ ಕೆಲವನ್ನು ಆಯ್ದು, 'ವಿವೇಕಾನಂದ ನೀತಿ ಕಥಾ ಮಂಜರಿ' ಮತ್ತು 'ವಿವೇಕಾನಂದ ನೀತಿ ಕಥೆಗಳು' ಎಂದು ಪ್ರಕಟಿಸಲಾಗಿದೆ. ೧೯೮೭ನೇ ಇಸವಿಯಲ್ಲಿ ಪ್ರಥಮವಾಗಿ ಪ್ರಕಾಶನಗೊಂಡ ಈ ಕಿರುಹೊತ್ತಿಗೆಯನ್ನು ಆರು ಬಾರಿ ಮುದ್ರಿಸಲಾಗಿದೆ. 'ಸ್ವಾಮಿ ವಿವೇಕಾನಂದ ಸಚಿತ್ರ' ಹೊತ್ತಿಗೆ ಪ್ರಥಮ ಮುದ್ರಣದಲ್ಲೇ ಹದಿನೈದು ಸಾವಿರ ಪ್ರತಿಗಳ ಮಾರಾಟ ವಾದದ್ದು ಹೆಮ್ಮೆಯ ಸಂಗತಿ. ಅಷ್ಟೇ ಅಲ್ಲದೆ ಮೂರು ಬಾರಿ ಮುದ್ರಣಗೊಂಡಿದೆ. ಇವಲ್ಲದೆ 'ಸೋದರಿ ನಿವೇದಿತಾ'ಳ ಜೀವನ ಕುರಿತು ಸಚಿತ್ರ ಕಿರುಹೊತ್ತಿಗೆಯೂ ಆಕೆಯ ನೂರ ಐವತ್ತನೇ ಜನ್ಮದಿನೋತ್ಸವದಂದು ಪ್ರಕಟವಾಯಿತು.




**ಇತರ ಹೊತ್ತಿಗೆಗಳು:** ಮೇಲೆ ಚರ್ಚಿಸಿದ ಸರಣಿ ಪುಸ್ತಕಗಳಲ್ಲದೆ 'ಮಹೇಶ್ವರನ ಕಥೆಗಳು', 'ಶ್ರೀರಾಮಾನುಜ', ಶ್ರೀ ಮಧ್ವಾಚಾರ್ಯ', 'ದಿವ್ಯಬಾಲಕರು', 'ಕಥೋಪದೇಶ', 'ಶ್ರೀ ಶಂಕರ', 'ಮಕ್ಕಳ ಶ್ರೀಕೃಷ್ಣ' (ಎರಡು ಭಾಗಗಳಲ್ಲಿ) ಮುಂತಾದ ಕಿರುಹೊತ್ತಿಗೆಗಳನ್ನೂ ಪ್ರಕಟಿಸಿದೆ.

## ಉಪಸಂಹಾರ

ಕಥೆ ಪುಸ್ತಕ ಎಂದ ಮೇಲೆ ಅದರಲ್ಲಿ ಚಿತ್ರಗಳಿರಲೇಬೇಕು. ಚಿತ್ರಗಳು ಪ್ರತಿಯೊಂದು ಪುಟವನ್ನೂ ಜೀವಂತವಾಗಿಸಿವೆ. ಈ ಕಾರ್ಯವನ್ನು ಅನೇಕರು ಸಫಲವಾಗಿ ನಿಭಾಯಿಸಿದ್ದಾರೆ. ಬಂಗಾಳದ ಸುಪ್ರಸಿದ್ಧ ಕಲಾವಿದರಾದ ಆಚಾರ್ಯ ನಂದಲಾಲ್ ಬೋಸ್, ಕಲ್ಕತ್ತಾ ನಗರದ ಪ್ರಸಿದ್ಧ ಕಲಾವಿದ ಶ್ರೀ ಬಿಸ್ವರಂಜನ್ ಚಕ್ರವರ್ತಿ, ಪಿ. ಪುರುಷೋತ್ತಮ ಕಾರಂತ, ಪದ್ಮಾವಾಸನ್, ರವಿ, ಶ್ರೀ ಪೂರ್ಣಚಂದ್ರ ಚಕ್ರವರ್ತಿ ಹಾಗೂ ರಾಮಕೃಷ್ಣ ಬೋಸ್ ರವರು ಚಿತ್ರಗಳನ್ನು ಅದೆಷ್ಟು ನೈಜವಾಗಿ ಬಿಡಿಸಿದ್ದಾರೆಂದರೆ ಓದುತ್ತಾ ಓದುತ್ತಾ ತಲ್ಲೀನನಾದ ಓದುಗನು ಆ ಸನ್ನಿವೇಶಗಳು ಈಗ ನಡೆಯುತ್ತದೆಯೇನೋ ಎಂಬುದಾಗಿ ಮೈಮರೆವನು.

ಈ ಪುಸ್ತಕಗಳ ಅವುಗಳ ಮಾರಾಟದ ದರ ಮಾತ್ರ ಅತ್ಯಂತ ಕಡಿಮೆ. ಎಲ್ಲರಿಗೂ ಕೈಗೆ ಎಟಕುವ ಬೆಲೆಯಲ್ಲಿ ದೊರೆಯುತ್ತದೆ. ಕಾಗದದ ಗುಣಮಟ್ಟವೂ ತುಂಬಾ ಚೆನ್ನಾಗಿದೆ.

ಭಾರತದೇಶದ ಎಳೆಯರ ಶೀಲ ರೂಪಿಸುವಲ್ಲಿ ಶ್ರೀರಾಮಕೃಷ್ಣ ಆಶ್ರಮ ಸೇವೆ ಅತ್ಯದ್ಭುತವಾದದ್ದು. ಶ್ಲಾಘನೀಯವಾದದ್ದು. ಏಕೆಂದರೆ ಕೇವಲ ಪುಸ್ತಿಕೆಗಳನ್ನು ಪ್ರಕಟಿಸುವ ಯೋಜನೆಯಲ್ಲದೆ, ಅದನ್ನು ತಲುಪಿಸುವುದರಲ್ಲೂ ಮುಂದಾಳುತ್ವ ವಹಿಸುತ್ತದೆ. ಸುಮಾರು ಒಂದು ದಶಕದಿಂದಲೂ ಪ್ರತಿ ವರ್ಷ 'ಶಾರದಾ ಜ್ಞಾನ ಸುಧಾ' ಯೋಜನೆಯ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸುತ್ತಾರೆ. ಕೇವಲ ವಿದ್ಯಾರ್ಥಿಗಳಲ್ಲದೆ ಮನೆಯವರೆಲ್ಲಾ ಓದುತ್ತಾರೆ. ✽